RNU AIR DHARWAD

## NOVEMBER 14, 2024
## AKASHAVANI - DHARWAD
## REGIONAL NEWS BULLETIN (KANNADA) 12 P.M.

ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿ, ಮಕ್ಕಳ ನೆಚ್ಚಿನ 'ಚಾ ಚಾ ನೆಹರೂ' ಅವರ 135ನೇ ಜನ್ಮ ದಿನವಿಂದು. ಪಂಡಿತ ಜವಹರಲಾಲ್ ನೆಹರು ಅವರ ಹುಟ್ಟಿದ ಹಬ್ಬ ನವೆಂಬರ್ 14ನ್ನು ಮಕ್ಕಳ ದಿನಾಚರಣೆಯಾಗಿ ದೇಶಾದ್ಯಂತ ಇಂದು ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ರಾಜ್ಯದ ಹಲವೆಡೆ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಲಾಗಿದೆ.

ಮಕ್ಕಳು ತಮ್ಮ ಸರ್ವಾಂಗೀಣ ವಿಕಾಸಕ್ಕಾಗಿ ವಿದ್ಯಾಭ್ಯಾಸದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು, ಕೊಪ್ಪಳ ಜಿಲ್ಲಾ ಬಾಲ ಭವನ ಸಮಿತಿ ಅಧ್ಯಕ್ಷ ರಾಹುಲ್ ರತ್ನಂ ಪಾಂಡೆ ಹೇಳಿದ್ದಾರೆ. ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಮಕ್ಕಳಿಗೆ ಆಯೋಜಿಸಲಾದ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

<><><>

ಮಗು ದತ್ತು ಪಡೆಯುವುದು ಎಂದರೆ ಅನಾಥ, ಪರಿತ್ಯಕ್ತ, ಒಪ್ಪಿಸಲ್ಪಟ್ಟ ಮಗುವಿಗೆ ಶಾಶ್ವತವಾಗಿ ಕೌಟುಂಬಿಕ ವಾತಾವರಣ ಕಲ್ಪಿಸುವುದಾಗಿದೆ ಎಂದು, ಬೆಳಗಾವಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ, ಮುರಳಿ ಮೋಹನ ರೆಡ್ಡಿ ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ 'ದತ್ತು ಅಧಿನಿಯಮ ಕಾಯ್ದೆ 2017ರ ಕುರಿತು' ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಹೆಚ್ಚಿನ ಮಾಹಿತಿಗೆ, ಸಹಾಯವಾಣಿ 1–0–9–8 ಕ್ಕೆ ಕರೆ ಮಾಡುವಂತೆ ಅವರು ತಿಳಿಸಿದರು.

<><><>

ಧಾರವಾಡದ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಆವರಣದಲ್ಲಿ, 14 ದಿನಗಳ ಕಾಲ ಆಯೋಜಿತ, ಹಾಥ್ ಕರ್ಗಾ ಕೈ ಮಗ್ಗ ಮೇಳ ಇಂದು ಸಮಾರೋಪಗೊಳ್ಳಲಿದೆ. ಕಳೆದ 1ನೇ ತಾರೀಖಿನಿಂದ ಆಯೋಜಿತವಾದ ಕೈ ಮಗ್ಗ ಮೇಳದಲ್ಲಿ, 10ನೇ ತಾರೀಖಿನ ವರೆಗೆ, 62 ಲಕ್ಷ 50 ಸಾವಿರ ರೂಪಾಯಿಗಳ ವಹಿವಾಟು ದಾಖಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ನವಲಗುಂದ ತಾಲೂಕಿನ, 20 ಕುಟುಂಬಗಳು ಕೈಮಗ್ಗ ನೇಕಾರಿಕೆ ಮುಂದುವರೆಸಿದ್ದು, ನವಲಗುಂದದ ಕೈ ಮಗ್ಗ ವಸ್ತುಗಳಿಗೆ ಬೇಡಿಕೆ ಹೆಚ್ಚಿದೆ ಎಂದು ನುಡಿದರು. ಜಮ್ಮು ಕಾಶ್ಮೀರ ಸೇರಿದಂತೆ 9 ರಾಜ್ಯಗಳಿಂದ, ಒಟ್ಟು 29 ಕೈ ಮಗ್ಗ ಸಹಕಾರ ಸಂಘಗಳು, ಬಳ್ಳಾರಿ, ಹಾಸನ ಸೇರಿದಂತೆ, 12 ಜಿಲ್ಲೆಗಳಿಂದ ನೇಕಾರರ ಕೈ ಮಗ್ಗ ಸಂಘಗಳು ಭಾಗವಹಿಸಿವೆ ಎಂದರು.

<><><>

ಕೇಂದ್ರದ ಬೆಂಬಲ ಬೆಲೆ ಯೋಜನೆ ಅಡಿ, ಗುಣಮಟ್ಟದ ಹತ್ತಿ ಖರೀದಿಸಲು, ಯಾದಗಿರಿ ಜಿಲ್ಲೆಯ, ಶಹಾಪುರ ತಾಲೂಕಿನಲ್ಲಿ, 14 ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡಲಾಗಿದೆ ಎಂದು ಯಾದಗಿರಿ ಜಿಲ್ಲೆ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದ್ದಾರೆ. ಶಹಾಪುರ ತಾಲೂಕಿನ ಹುಲಕಲ್ಲಿನ ಮಣಿಕಂಠ ಹತ್ತಿ ಮಿಲ್‌ನಲ್ಲಿ ಹತ್ತಿ ಖರೀದಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿಯೇ ಸಗರನಾಡು ಭಾಗದ ಹತ್ತಿ ಬೆಳೆ ಉತ್ಕೃಷ್ಟವಾಗಿದೆ. ಈ ಭಾಗದ ಹತ್ತಿಗೆ ಹೆಚ್ಚಿನ ಬೆಲೆ ಸಹ ಇದೆ.

ಪ್ರತಿ ಕ್ವಿಂಟಾಲ್ ಹತ್ತಿಗೆ 7 ಸಾವಿರದ 521 ರೂಪಾಯಿ ಬೆಲೆ ನಿಗದಿಪಡಿಸಲಾಗಿದೆ. ಒಂದು ಎಕರೆಗೆ 12 ಕ್ವಿಂಟಾಲ್ ಹತ್ತಿ ಮಾತ್ರ, ರೈತರು ಮಾರಾಟ ಮಾಡಬಹುದಾಗಿದೆ, ಎಂದು ಸಚಿವರು ಹೇಳಿದರು.

<><><>

ಮಂಡ್ಯ ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆ ಅಡಿ, ಭತ್ತ ಹಾಗೂ ರಾಗಿ ಖರೀದಿಗೆ, ರೈತರ ನೋಂದಣಿ ಕೇಂದ್ರಗಳನ್ನು ಶೀಘ್ರ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದ್ದಾರೆ. ಕೋಲಾರ ಜಿಲ್ಲೆಯಲ್ಲಿ, ಕನಿಷ್ಟ ಬೆಂಬಲ ಬೆಲೆ ಯೋಜನೆ ಅಡಿ, ಭತ್ತ, ರಾಗಿ, ಜೋಳದ ಬೆಳೆಗಳನ್ನು ರೈತರಿಂದ ನೇರವಾಗಿ ಖರೀದಿಸಲು ಡಿಸೆಂಬರ್ 1 ರಿಂದ ರೈತರ ನೊಂದಣಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಅಕ್ರಂ ಪಾಷಾ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಏಳು ತಾಲೂಕುಗಳಲ್ಲಿ ಬೆಂಬಲ ಬೆಲೆ ಯೋಜನೆ ಅಡಿ, ಭತ್ತ ಖರೀದಿಸಲು ನಾಳೆಯಿಂದ ರೈತರ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ, ರೈತರಿಂದ ಭತ್ತ ಖರೀದಿಗಾಗಿ ನಾಳೆಯಿಂದ ರೈತರ ನೋಂದಣಿ ಕಾರ್ಯ ಆರಂಭವಾಗಲಿದೆ. ಕೊಪ್ಪಳ ಜಿಲ್ಲೆಯ ಕಾರಟಗಿ, ಗಂಗಾವತಿ ಹಾಗೂ ಕೊಪ್ಪಳ ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ. ಖರೀದಿ ಕೇಂದ್ರ ತೆರೆಯಲಾಗುತ್ತಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ಥಿರ ನೀತಿ ಹಾಗೂ ನಿಲುವಿನ ನಾಯಕತ್ವದಿಂದಾಗಿ, ದೇಶ ಆರ್ಥಿಕವಾಗಿ ಬಲಿಷ್ಠವಾಗುತ್ತಿದೆ. ದೇಶದ ಸಮಗ್ರ ಅಭಿವೃದ್ಧಿಗಾಗಿ ಅಲ್ಪಾವಧಿಯ ಹಾಗೂ ದೀರ್ಘ ಕಾಲದ ಗುರಿಗಳನ್ನು ಹಾಕಿಕೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಮಂಗಳೂರಿನಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ವೇಗಗತಿಯಲ್ಲಿ ಪ್ರಗತಿ ಸಾಧಿಸುತ್ತಿರುವ ಭಾರತವನ್ನು ಉತ್ಪಾದನಾ ಹಬ್ ಮಾಡುವ ಗುರಿ ಇಟ್ಟುಕೊಂಡು, ಕೇಂದ್ರ ಮುನ್ನಡೆಯುತ್ತಿದೆ ಎಂದರು.

<><><>

ಧಾರವಾಡ ರಂಗಾಯಣ ಹಾಗೂ ಸಕ್ಕರಿ ಬಾಳಾಚಾರ್ ಟ್ರಸ್ಟ ಸಂಯುಕ್ತ ಆಶ್ರಯದಲ್ಲಿ ಧಾರವಾಡದ ಬಸವರಾಜ ರಾಜಗುರು ಬಯಲು ರಂಗ ಮಂದಿರದಲ್ಲಿ ಇಂದಿನಿಂದ 3 ದಿನಗಳ ಕಾಲ ಆಧುನಿಕ ಕನ್ನಡ ರಂಗಭೂಮಿ ದಿನದ ಅಂಗವಾಗಿ ನಾಟಕೋತ್ಸವ ಆಯೋಜಿಸಲಾಗಿದೆ. ಸಕ್ಕರಿ ಬಾಳಾಚಾರ್ ಶಾಂತಕವಿ ಟ್ರಸ್ಟ ಅಧ್ಯಕ್ಷರಾದ ಬಾಬುರಾವ್ ಸಕ್ಕರಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಧಾರವಾಡ ರಂಗಾಯಣದ ನಿರ್ದೇಶಕರಾದ ಡಾಕ್ಟರ್ ರಾಜು ತಾಳಿಕೋಟಿ ಅಧ್ಯಕ್ಷತೆವಹಿಸಲಿದ್ದಾರೆ. ಸರ್ಕಾರ ಪದವಿ ಕಾಲೇಜಿನ ಉಪನ್ಯಾಸಕರಾದ ಡಾಕ್ಟರ್ ಗುರುನಾಥ್ ಬಡಿಗೇರ 'ಶಾಂತ ಕವಿಗಳ ಬದುಕು ಬರಹ' ಕುರಿತು ಉಪನ್ಯಾಸ ನೀಡಲಿದ್ದಾರೆ. ಡಾಕ್ಟರ ಪ್ರಕಾಶ ಗರುಡ ಅವರ ನಿರ್ದೇಶನದಲ್ಲಿ 'ವಿಶ್ವಾಮಿತ್ರ ಮೇನಕೆ ಡಾನ್ಸ ಮಾಡೊದು ಏನಕೆ' ನಾಟಕ ಇಂದು ಪ್ರದರ್ಶನಗೊಳ್ಳಲಿದೆ. ನಾಳೆ 'ಮಾಲತಿ ಮಾಧವ' ಹಾಗೂ ನಾಡಿದ್ದು 'ಅಂಕದ ಪರದೆ' ನಾಟಕಗಳು ಹೆಗ್ಗೋಡು ನೀನಾಸಂ ತಂಡದಿಂದ ಪ್ರದರ್ಶನಗೊಳ್ಳಲಿವೆ ಎಂದು ಧಾರವಾಡ ರಂಗಾಯಣದ ಆಡಳಿತಾಧಿಕಾರಿ ಶಶಿಕಲಾ.ವೀ.ಹುಡೇದ ಮಾಹಿತಿ ನೀಡಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.

<><><>